Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

Volume 39 | Issue - 9 | 29th August 2024

## ರೋಟರಿ ಕುಟುಂಬ ಸಮ್ಮಿಲನ

ಕಾರ್ಯಕ್ರಮ : ಯಕ್ಷಗಾನ

ರಾತ್ರಿ 7.45ರಿಂದ 8.45ರವರೆಗೆ

ಯಕ್ಷಗಾನ ಕಲಾಕೇಂದ್ರ, ಹಂಗಾರಕಟ್ಟೆ, ಐರೋಡಿ ಇವರ ಸಹಕಾರದೊಂದಿಗೆ

ಪ್ರಸಂಗ : **ಅರ್ಜುನ ಸನ್ಯಾಸಿ**

ಪ್ರಾಯೋಜಕರು : ರೊ. ಜಿ. ಸಂತೋಷ್ ಕುಮಾರ್ ಶೆಟ್ಟಿ, ರೊ. ಜಯಕರ್ ಶೆಟ್ಟಿ ರೊ. ಡಾ. ಆದರ್ಶ್ ಹೆಬ್ಬಾರ್, ರೊ. ಶ್ರೀನಿವಾಸ ಶೇಟ್, ರೊ. ರಮೇಶ್ ಶೆಟ್ಟಿ, ರೊ. ರೇಗನ್ ಲೋಬೋ, ರೊ. ಅನಿಲ್ ಡಿಸಿಲ್ವಾ

Time : 7.00 p.m.
Venue : Kumbhashi Radhabai Rangamandira,
Bhandarkars' College, Kundapura

**39th year of Service and Fellowship**

# ವಾರದ ಸಭೆಯ ವರದಿ




ಕಳೆದ ವಾರದ ಸಾಪ್ತಾಹಿಕ ಸಭೆಯು ತಾ. 22ರ ಗುರುವಾರ ಹೋಟೆಲ್ ಶಿವಪ್ರಸಾದ್ ಗ್ರ್ಯಾಂಡ್‌ನಲ್ಲಿ ನಡೆಯಿತು. ಮಂಗಳೂರಿನ ನಿವೃತ್ತ ಇಂಜಿನಿಯರ್ ಶ್ರೀ ಗಿರೀಶ್ ಐತಾಳ್‌ರವರು ಈ ಸಭೆಯಲ್ಲಿ ತಮ್ಮ ನೆಚ್ಚಿನ ವಿಷಯವಾದ "ವಿಷಯುಕ್ತ ಆಹಾರದಿಂದ ವಿಷಮುಕ್ತ ಆಹಾರ"ದ ಕಡೆಗೆ ಎನ್ನುವ ವಿಚಾರದಲ್ಲಿ ಉಪನ್ಯಾಸವನ್ನು ನೀಡಲು ಅತಿಥಿಯಾಗಿ ಆಗಮಿಸಿದ್ದರು. ರೊ. ಶ್ರೀನಿವಾಸ್ ಶೇಟ್‌ರವರು ಪ್ರಾರ್ಥನೆಯ ಮೂಲಕ ಸಭೆಗೆ ಚಾಲನೆಯನ್ನು ನೀಡಿದರು. ಕಳೆದ ವಾರದ ವರದಿಯನ್ನು ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರು ಸಭೆಯಲ್ಲಿ ಮಂಡಿಸಿದರು. ರೋಟರಿ ಮಾಹಿತಿ ನೀಡಿದ ರೊ. ವಾಸುದೇವ ಕಾರಂತರು ಜನಸಾಮಾನ್ಯನನ್ನು ಉತ್ತಮ ರೊಟೇರಿಯನ್ ಆಗಿ ಪರಿವರ್ತಿಸಬೇಕಾದರೆ ರೋಟರಿ ರೂಪಿಸಿದ ನಿಯಮಗಳನ್ನು ಸಭೆಗೆ ನೀಡಿದರು. ವಾರದ ಚಿಂತನೆಯನ್ನು ನೀಡಿದ ರೊ. ಮನೋಹರ ಭಟ್ಟರು, ನಾವಾಡುವ ಮಾತುಗಳ ತೂಕವನ್ನು, ತಮ್ಮ ಮಾತಿನಲ್ಲಿ ತಿಳಿಸಿದರು.

ಮೂಲತಃ ಉಪ್ಪಿನಕುದ್ರುವಿನವರಾಗಿದ್ದ ಇಂದಿನ ಮುಖ್ಯ ಅತಿಥಿ ಶ್ರೀ ಗಿರೀಶ್ ಐತಾಳ್‌ರವರನ್ನು ಗುರುತಿಸಿ, ಸಭೆಗೆ ಕರೆಸಿದ್ದ, ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರು ಅತಿಥಿಯವರನ್ನು ಸಭೆಗೆ ಪರಿಚಯಿಸಿದರು. ಉತ್ತಮ ಉಪನ್ಯಾಸವನ್ನು ನೀಡಿದ ಶ್ರೀ ಐತಾಳರು ಬೆಳಗ್ಗಿನಿಂದ ರಾತ್ರಿಯವರೆಗೆ ನಾವು ತಿಳಿದೋ, ತಿಳಿಯದೆಯೋ ಅಥವಾ ನಾಲಗೆಯ ದಾಸರಾಗಿ ಎಷ್ಟೊಂದು ವಿಷಪೂರಿತ ಆಹಾರಗಳನ್ನು ಅನಗತ್ಯವಾಗಿ ದೇಹದೊಳಗೆ ತುರುಕಿಸುತ್ತಿರುವುದನ್ನು ವಿವರವಾಗಿ ತಿಳಿಸಿದರು. 5 ಬಿಳಿವಿಷಗಳೆಂದು ಕುಖ್ಯಾತಿ ಪಡೆದಿರುವ ನಾವು ದಿನನಿತ್ಯ ಉಪಯೋಗಿಸುವ ಸಕ್ಕರೆ, ಹಾಲು, ಉಪ್ಪು, ಮೈದಾ ಮತ್ತು ಬಿಳಿ ಅಕ್ಕಿಯಿಂದ ನಾವು ಹೊರಬರಲು ಸಾಧ್ಯವಾಗದೇ ಇರುವ ಪರಿಸ್ಥಿತಿಯಿಂದಾಗಿ ಇಂದು ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗಳು ತೀವ್ರವಾಗಿ ಹೆಚ್ಚುತ್ತಿರುವುದು ದುರಂತವೆಂದರು. ಮಂಗಳೂರಿನ ತಮ್ಮ ಚಿಕ್ಕ ವಾಸಸ್ಥಳದಲ್ಲೂ ಸಾವಯವ ರೀತಿಯಿಂದ ಜೀವಾಮೃತವನ್ನು ಬಳಸಿ ಸಾವಯವ ಕೃಷಿಯನ್ನು ಮಾಡುತ್ತಿರುವುದರಿಂದ ಕ್ರಿಯಾಶೀಲನಾಗಿ, ಉತ್ತಮ ಆರೋಗ್ಯವನ್ನು ಕಾಪಾಡಲು ಮತ್ತು ನೆಮ್ಮದಿಯನ್ನು ಹೊಂದಲು ಸಾಧ್ಯವಾಗಿದೆ ಎಂದರು. ನಾಲಿಗೆಯನ್ನು ನಿಯಂತ್ರಣದಲ್ಲಿಟ್ಟರೆ ಆಹಾರವನ್ನು ಮತ್ತು ಮಾತುಗಳನ್ನು ಕೂಡಾ ನಿಯಂತ್ರಿಸಬಹುದು ಎನ್ನುವ ಅವರ ಮಾತುಗಳು ತುಂಬಾ ಮಾರ್ಮಿಕವಾಗಿದ್ದವು. ಹಿರಿಯ ಸದಸ್ಯರಾದ ರೊ. ವಾಸುದೇವ ಕಾರಂತರು ಮತ್ತು ಹೊಸ ಸದಸ್ಯರಾದ ರೊ. ರೇಗನ್ ಲೋಬೋರವರು ಅತಿಥಿಗಳಿಗೆ ಸ್ಮರಣಿಕೆಯನ್ನು ನೀಡಿದರು.

ಅಧ್ಯಕ್ಷರಾದ ರೊ. ಜುಡಿತ್ ಮೆಂಡೋನ್ಸಾರವರು ಸ್ವಾತಂತ್ರ್ಯ ದಿನಾಚರಣೆಯ ದಿನದಂದು ನಮ್ಮ ಕ್ಲಬ್ಬಿನಿಂದ ನಡೆದ ಸರಣಿ ಕಾರ್ಯಕ್ರಮಗಳಿಗೆ ಸಹಕರಿಸಿದ ಹಾಗೂ ಭಾಗವಹಿಸಿದ ಸದಸ್ಯರಿಗೆ ಧನ್ಯವಾದಗಳನ್ನು ನೀಡಿ, ಆ ದಿನದ ಕಾರ್ಯಕ್ರಮದ ಒಟ್ಟು ಖರ್ಚು ರೂ. 31,800/– ರ ವಿವರಗಳನ್ನು ನೀಡಿದರು. ಮುಂದಿನ ವಾರದಲ್ಲಿ ನಡೆಯುವ ಪ್ರೋಟೀನ್ ಪೌಡರ್ ವಿತರಣೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಎಲ್ಲಾ ಸದಸ್ಯರನ್ನು ಕೋರಿದರು. ರೊ. ಔಝ್ಲಿನ್ ರೆಬೆಲ್ಲೋರವರು ಲಕ್ಕಿ ರೊಟೇರಿಯನ್ ಆಗಿ ಆಯ್ಕೆಯಾದರು. ಸಭೆಯಲ್ಲಿ ಕೆಲವೊಂದು ಹಾಸ್ಯಮಯ ಸನ್ನಿವೇಶಗಳು ಮೂಡಿಬಂದಿದ್ದು, ಸದಸ್ಯರಿಗೆ ಮುದ ನೀಡಿತು. ರೊ. ಜೆರಾಲ್ಡ್ ಕ್ರಾಸ್ಟೋರವರು ನಗೆಹನಿಯನ್ನು ಸಿಡಿಸಿದರು. ರೊ. ಸುರೇಖ ಪುರಾಣಿಕ್‌ರವರು ಅತಿಥಿಗಳಿಗೆ ಮತ್ತು ಸದಸ್ಯರಿಗೆ ಧನ್ಯವಾದವನ್ನಿತ್ತರು. ರಾಷ್ಟ್ರಗೀತೆಯೊಂದಿಗೆ ಸಭೆಯು ಸಂಪನ್ನಗೊಂಡಿತು.


## August Month in Rotary







ಆಗಸ್ಟ್ 24 ಮತ್ತು 25ರಂದು ಶಿವಮೊಗ್ಗದಲ್ಲಿ ನಡೆದ Membership development ಹಾಗೂ Public Imageನ Dist. Seminar ಕಾರ್ಯಕ್ರಮ 'ಪ್ರಗತಿ' ಯಲ್ಲಿ ನಮ್ಮ ಹೆಮ್ಮೆಯ ಪಿಡಿಜಿ ರೊ. ಅಭಿನಂದನ್ ಶೆಟ್ಟಿಯವರು Zone 7 ರ RPIC ಗೆ ನೇಮಕಗೊಂಡಿರುವುದಕ್ಕೆ ಅತಿಥಿ ಅಭ್ಯಾಗತರ ಹಾಗೂ ಆಹ್ವಾನಿತರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.




ಆಗಸ್ಟ್ 24 ಮತ್ತು 25ರಂದು ಶಿವಮೊಗ್ಗದಲ್ಲಿ ನಡೆದ Membership development ಹಾಗೂ Public Imageನ Dist. Seminar ಕಾರ್ಯಕ್ರಮ 'ಪ್ರಗತಿ'ಯಲ್ಲಿ ನಮ್ಮ ರೋಟರಿ ಕ್ಲಬ್ ಕುಂದಾಪುರ ದಕ್ಷಿಣವು ಮೀಡಿಯಂ ಕ್ಲಬ್ ವಿಭಾಗದಲ್ಲಿ 27 ಪ್ರಶಸ್ತಿಗಳೊಂದಿಗೆ Best Club ಪ್ರಶಸ್ತಿಯಲ್ಲಿ ದ್ವಿತೀಯ ಸ್ಥಾನಿಯಾಗಿ ಹೊರಹೊಮ್ಮಿರುತ್ತದೆ. ಆ ಕಾರ್ಯಕ್ರಮದಲ್ಲಿ ನಮ್ಮ ಕ್ಲಬ್ಬಿನಿಂದ 18 ಸದಸ್ಯರು ನೊಂದಣಿ ಮಾಡಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹಾಜರಿದ್ದರು. ಈ ಸಾಲಿನ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾ ಮತ್ತು ಸದಸ್ಯರು ರೊ. ಸುರೇಶ್ ಮಲ್ಯ ಮತ್ತು ತಂಡಕ್ಕೆ ಅಭಿನಂದನೆಗಳನ್ನು ಸಲ್ಲಿಸಿರುತ್ತಾರೆ.

### Past President ರೊ. ಸುರೇಶ್ ಮಲ್ಯರಿಂದ ಧನ್ಯವಾದಗಳು

ವರುಷ 2023 ಹಾಗೂ 2024ರ ಸಾಲಿನಲ್ಲಿ ನಮ್ಮ ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ನಡೆಸಿದ ಕಾರ್ಯ ಚಟುವಟಿಕೆಗಳಿಗೆ ಶಿವಮೊಗ್ಗದಲ್ಲಿ ನಡೆದ District awards night ಸಮಾರಂಭದಲ್ಲಿ ಮೀಡಿಯಂ ಕ್ಲಬ್ ವಿಭಾಗದಲ್ಲಿ 27 ಪ್ರಶಸ್ತಿಗಳೊಂದಿಗೆ ಬೆಸ್ಟ್ ಕ್ಲಬ್ ವಿಭಾಗದಲ್ಲಿ 2nd prize ದೊರಕಿರುತ್ತದೆ. ಈ ಒಂದು ವರ್ಷ ನಮ್ಮ ರೋಟರಿ ಕ್ಲಬ್ಬಿನ ಸರ್ವ ಸದಸ್ಯರು ನೀಡಿದ ಸಹಕಾರ ಹಾಗೂ ಸಹಾಯಗಳಿಂದಾಗಿ ಈ ಪ್ರಶಸ್ತಿಗಳನ್ನು ನಮ್ಮ ಸಂಸ್ಥೆಯು ಪಡೆಯಲು ಸಾಧ್ಯವಾಗಿದೆ ಎಂದು ತಿಳಿಸಲು ಹರ್ಷಿಸುತ್ತಿದ್ದೇನೆ. ಈ ಪ್ರಯುಕ್ತ ರೋಟರಿ ಕ್ಲಬ್ ದಕ್ಷಿಣದ ಸರ್ವ ಸದಸ್ಯರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ.

– ರೊ. ಸುರೇಶ್ ಮಲ್ಯ

## ರೋಟರಿ ಕುಟುಂಬ ಸಮ್ಮಿಲನ

## ಯಕ್ಷಗಾನ

ರಾತ್ರಿ 7.45ರಿಂದ 8.45ರವರೆಗೆ ಯಕ್ಷಗಾನ ಕಲಾಕೇಂದ್ರ, ಹಂಗಾರಕಟ್ಟೆ, ಐರೋಡಿ ಇವರ ಸಹಕಾರದೊಂದಿಗೆ ಪ್ರಸಂಗ : **ಅರ್ಜುನ ಸನ್ಯಾಸಿ**

ಕಲಾವಿದರು :

ಭಾಗವತಿಕೆ : ಪ್ರಸನ್ನ ಭಟ್ಟ, ಬಾಳ್ಕಲ್
ಮದ್ದಲೆ : ಗಜಾನನ ಭಂಡಾರಿ, ಬೋಳ್ಗರೆ
ಚಂಡೆ : ಕೋಟ ಶಿವಾನಂದ
ಬಲರಾಮ : ಕೊಂಡದಕುಳಿ ರಾಮಚಂದ್ರ ಹೆಗಡೆ
ಅರ್ಜುನ ಸನ್ಯಾಸಿ : ಅಶೋಕ ಭಟ್, ಸಿದ್ಧಾಪುರ
ದೂತ : ಶ್ರೀಧರ ಭಟ್, ಕಾಸರಗೋಡು


Rtn. Dr. S. N. Padiyar
1985-86 & 1986-87


Rtn. B. Arun Kumar Shetty
1987-88


Rtn. Dr. H. Rammohan
1988-89


Rtn. K. Shridhar Kamath
1989-90


Rtn. Dr. Anand Nayak
1990-91


Rtn. B. Ramachandra Prabhu
1991-92


Rtn. G. Santhosh Kumar Shetty
1992-93


Rtn. Dr. H. A. Vishweshwar
1993-94


Rtn. Dr. H. R. Hebbar
1994-95


Rtn. K. T. Surendranath
1995-96


Rtn. S. Sadananda Chatra
1996-97


Rtn. B. C. Somayaji
1997-98


Rtn. K. Suresh Kamath
1998-99


Rtn. S. Subraya Halambi
1999-2000



Rtn. S. Vijaya Shetty
2000-01



Rtn. K. Seetharama Nackathaya
2001-02


Rtn. U. S. Shenoy
2002-03


Rtn. Dr. Umesh Puthran
2003-04


Rtn. Dr. B. V. Udupa
2004-05


Rtn. A. Shantharam Pai
2005-06


Rtn. K. Shantharam Prabhu
2006-07

## Rotary Information

"Rotary has designated each month for specific activites in a Rotary year commencing from July to June. Accordingly month of August is meant for Membership and New club Development

Membership development is a continuous process and each club has to follow the following stages while recruiting new members to the club

1) Identifying a proper person
2) Identified person to be Introduced
3) To be invited to the club
4) To be inducted to the Rotary
5) Proper Orientation to the new member
6) Finally the member has to be engaged in Rotary works

If these steps are followed while recruiting new members, retention of members also will be an easy task.

- presented by **Rtn. Vasudeva Karanth**

## ಕಳೆದ ವಾರದ ಚಿಂತನೆ

ಮಾತುಗಳನ್ನು ಆಡುವುದು ಬಹಳ ಸುಲಭ!
ಮಾತುಗಳನ್ನು ತಪ್ಪಿ ಆಡಿದರೆ ಆಗಬಹುದಾದ ಅನಾಹುತ ಅಗಾಧ!!
ನಮ್ಮ ಮಾತುಗಳು ನಮಗೆ ತಟ್ಟಲಾರವು!
ಆದರೆ ನಮ್ಮ ಮಾತುಗಳು ಬೇರೊಬ್ಬರ ಹೃದಯವನ್ನು ಗಾಢವಾಗಿ ತಟ್ಟಬಹುದು!
ಆದುದರಿಂದ ಮಾತನಾಡುವಾಗ ಎಚ್ಚರ ಅಗತ್ಯ!!

ನೀಡಿದವರು : ರೊ. ಮನೋಹರ್ ಪಿ.

ಮಧ್ವರಾಜ್ ಎನಿಮಲ್ ಕೇರ್ ಟ್ರಸ್ಟ್ ಮಲ್ಪೆ, ಇನ್ನರ್ ವ್ಹೀಲ್ ಕುಂದಾಪುರ ದಕ್ಷಿಣ ಮತ್ತು ರೋಟರಿ ಕ್ಲಬ್ ಕುಂದಾಪುರ ದಕ್ಷಿಣ, WVS India ಇವರ ಸಹಭಾಗಿತ್ವದಲ್ಲಿ ಕುಂದಾಪುರ ಸರಕಾರಿ ಪಶು ಆಸ್ಪತ್ರೆಯಲ್ಲಿ ಸೆಪ್ಟೆಂಬರ್ 2 ರಿಂದ 6ರ ತನಕ, ಮನೆಯಲ್ಲಿ ಸಾಕಿದ ದೇಸಿ ನಾಯಿಗಳಿಗೆ (ಬೀದಿ ನಾಯಿ ಅಲ್ಲ) ಸಂತಾನಹರಣ ಶಸ್ತ್ರಚಿಕಿತ್ಸೆ ನಡೆಸಲಾಗುವುದು. ತಾವು ತಮ್ಮ ಮನೆಯಲ್ಲಿ ಸ್ನೇಹಿತರಲ್ಲಿ, ಕುಟುಂಬಿಕರಲ್ಲಿ, ನೆರೆಹೊರೆಯವರಲ್ಲಿ ತಿಳಿಸಿ ಈ ಕಾರ್ಯಕ್ರಮದ ಸದುಪಯೋಗ ಪಡೆಯಬೇಕೆಂದು ವಿನಂತಿ. ಶಸ್ತ್ರಚಿಕಿತ್ಸೆ ಉಚಿತವಾಗಿರುತ್ತದೆ. ನಾಯಿಗಳನ್ನು ತಂದು ಚಿಕಿತ್ಸೆಯ ನಂತರ ತೆಗೆದುಕೊಂಡು ಹೋಗುವ ಜವಾಬ್ದಾರಿ ಮಾತ್ರ ನಾಯಿಯ ಮಾಲೀಕರದ್ದಾಗಿರುತ್ತದೆ.

ಮುಂಚಿತವಾಗಿ ನೋಂದಣಿ ಮಾಡಿ, ಸಮಯ ನಿಗದಿ ಪಡಿಸಲು ಈ ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಬೇಕಾಗಿ ವಿನಂತಿ. **8277390909/ 98447 90531**

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ತಾ. **01–09–2024**ನೇ ಆದಿತ್ಯವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ವಿನಾಯಕ್ ಪೈ ಮತ್ತು ಆ್ಯನ್ ಅನನ್ಯಾ ಪೈ ಇವರಿಗೆ ಕ್ಲಬ್ಬಿನ ಪರವಾಗಿ ಶುಭಾಶಯಗಳು. ಮೊ. : **9448770432**

## The 4 Way Test

*of the things we think, say or do*

1. Is it the TRUTH?
2. Is it FAIR to all concerned?
3. Will it build GOODWILL and BETTER FRIENDSHIPS?
4. Will it be BENEFICIAL to all concerned?

Email id – rotaryclub.kundapurasouth@gmail.com


Rtn. T. Raghavendra Hatwar
2007-08



Rtn. K. Shankar
2008-09


Rtn. S. Jayakar Shetty
2009-10


Rtn. K. K. Kanchan
2010-11


Rtn. Abhinandan A. Shetty
2011-12


Rtn. Vivian Crasto
2012-13


Rtn. G. Shreedhar Shetty
2013-14


Rtn. K. P. Bhat
2014-15


Rtn. P. Vasudeva Karanth
2015-16


Rtn. Aouzline F. Rebello
2016-17



Rtn. J. Srinath Rao
2017-18


Rtn. Johnson D' Almeida
2018-19


Rtn.Devaraj
2019-20


Rtn. Dr. Uttam Kumar Shetty
2020-21


Rtn.Mahendr Shetty
2021-22


Rtn.Sathyanarayana Puranik
2022-23


Rtn.Suresh Mallya
2023-24

*This Bulletin is sponsored by :*
**Rtn. Bharath Shetty**
**Mob. : 9964291755**

For Private Circulation only